**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 27.06.2026**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಕೆ ಸಿ ಎಸ್ ವಕೀಲರಿಂದ**

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ . ನಮ್ಮ ಊರಿನಿಂದ ಹೆಬ್ಬಾಲೆ ಗ್ರಾಮಕ್ಕೆ 5-6 ಕಿ ಮಿಾ ಅಂತರವಿರುತ್ತದೆ . ಪಿರ್ಯಾದುದಾರರು ನನಗೆ ಗೊತ್ತಿಲ್ಲ. ಆರೋಪಿಯು ನನಗೆ ಕಲಾರವರ ಬಳಿ ಒಂದು ಲಕ್ಷ ಹಣವನ್ನು ಸಾಲವಾಗಿ ಕೊಡಿಸಿದ್ದರು . ಸುಮಾರು 5-6 ವರುಷಗಳ ಹಿಂದೆ ಆರೋಪಿಯು ನನಗೆ ಸದರಿ ಸಾಲವನ್ನು ಕೊಡಿಸಿದ್ದರು . ಆರೋಪಿಯು ನನಗೆ ನಗದು ಮುಖಾಂತರ ನನಗೆ ಸಾಲವನ್ನು ಕೊಡಿಸಿದ್ದರು . ಆರೋಪಿಯು ಎಷ್ಟು ಹಣವನ್ನು ಸಾಲವಾಗಿ ಪಡೆದುಕೊಂಡು ನನಗೆ ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯಾಗಲಿ ಅಥವಾ ಪಿರ್ಯಾದುದಾರರಾಗಲಿ ಅಥವಾ ಪಿರ್ಯಾದುರದಾರರ ತಾಯಿಯ ಮಧ್ಯೆ ಏನು ವ್ಯವಹಾರವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ . ಸದರಿ ಆರೋಪಿ ಮತ್ತು ಪಿರ್ಯಾದುದಾರರ ವೈಯಕ್ತಿಕ ವ್ಯವಹಾರದ ಬಗ್ಗೆ ತಿಳಿದಿರುವುದಿಲ್ಲ ಎಂದು ನಾನು ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. 5-6 ವರುಷಗಳ ಹಿಂದೆ ಕಲಾವತಿಯವರಿಂದ ಆರೋಪಿಯು ಸಾಲ ಪಡೆದು ನನಗೆ ತಂದು ಕೊಟ್ಟಿದ್ದರು ಎಂಬ ವಿಚಾರ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ . ನಾನು ಪ್ರಮಾಣ ಪತ್ರವನ್ನು ಓದಿ ನೋಡಿರುತ್ತೇನೆ ಅದರಲ್ಲಿ ಮೇಲೆ ತಿಳಿಸಿದ ವಿಚಾರ ಇರುತ್ತದೆ .

ಮೇಲೆ ತಿಳಿಸಿದ ವ್ಯವಹಾರವನ್ನು ಹೊರತು ಪಡಿಸಿ ನನ್ನ ಹಾಗೂ ಆರೋಪಿ ಮತ್ತು ಪಿರ್ಯಾದುದಾರರು ಮತ್ತು ಅವರ ತಾಯಿಯ ಮಧ್ಯೆ ಬೇರೆ ಯಾವುದೇ ವ್ಯವಹಾರ ಇರುವುದಿಲ್ಲ. ನಾನು ಕಲಾವತಿಯವರೊಂದಿಗೆ ಮೇಲೆ ತಿಳಿಸಿದ ಒಂದು ಲಕ್ಷ ಕ್ಕೆ ಸಂಬಂಧಪಟ್ಟಂತೆ ನಾನೇ ವೈಯಕ್ತಿಕವಾಗಿ ಕಲಾವತಿಯವರ ಬಳಿ ಹಣ ಪಡೆದಿರುತ್ತೇನೆ . ಕಲಾವತಿಯವರು ನನಗೆ ಹಣವನ್ನು ಕೊಟ್ಟಿರುತ್ತಾರೆ . ಸದರಿ ಹಣವನ್ನು 2011 ರಲ್ಲಿ ಕೊಟ್ಟಿರುತ್ತಾರೆ . ಸದರಿ ಸಾಲ ಹಿಂತಿರುಗಿಸಲು ನಾನು ಒಟ್ಟು 5 ತಿಂಗಳು 5 ಸಾವಿರದಂತೆ ನೀಡಿರುತ್ತೇನೆ . ನಂತರ ಉಳಿದ ಹಣವನ್ನು ಕೊಡಲು ಸಾಧ್ಯವಾಗಿರುವುದಿಲ್ಲ. ಮೇಲೆ ಹೇಳಿದಂತೆ ಇನ್ನು 75ಸಾವಿರ ಕೊಡಲು ನಾನು ಬಾಕಿ ಇರುತ್ತೇನೆ ಎಂದರೆ ಸರಿ ಸಾಕ್ಷಿಯು ಮುಂದುವರಿದು ಕಲಾ ರವರಿಗೆ 30 ಸಾವಿರ ಪಡೆದುಕೊಂಡು ವ್ಯವಹಾರವನ್ನು ಮುಗಿಸಲು ಕೇಳಿಕೊಂಡಿರುತ್ತೇನೆ ಎಂದು ನುಡಿಯುವರು . ಅಂದಾಜು ಎಷ್ಟು ವರುಷದ ಹಿಂದೆ 30 ಸಾವಿರವನ್ನು ಕೊಡುತ್ತೇನೆ ಎಂದು ತಿಳಿಸಿರುತ್ತೇನೆ ಎಂದು ನನಗೆ ನೆನಪಿಲ್ಲ.

ಆ ನಂತರದ ದಿನಗಳಲ್ಲಿ ಕಲಾ ರವರಿಗೆ ನಾನು ಹಣವನ್ನು ಕೊಡಲು ಪ್ರಯತ್ನಿಸಿರುವುದಿಲ್ಲ. ಸದರಿ 75 ಸಾವಿರ ಹಣ ಬಾಕಿ ಇದ್ದು 30 ಸಾವಿರ ಹಣವನ್ನು ಕೊಡಲು ಹೋಗಿರುತ್ತೇನೆ ಎಂಬ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಲು ಯಾವುದೇ ತೊಂದರೆ ಇರಲಿಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಒಂದು ಲಕ್ಷ ಸಾಲ ಪಡೆದಿರುವುದು ಬರೆಸಿರುತ್ತೇನೆ ಚೀಟಿ ಹಣ ಎಂದು ಬರೆಸಿರುವುದಿಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಆರೋಪಿಯು ನನ್ನ ಪರವಾಗಿ ಚೀಟಿ ಹಣ ಕೂಗಿದ್ದಕ್ಕೆ ಚೆಕ್ ನ್ನು ಕೊಟ್ಟಿದ್ದರು ಎಂದು ಬರೆಸಿರುತ್ತೇನೆ . ನಾನು ಪಿರ್ಯಾದುರದಾರರ ಬಳಿಯಾಗಲಿ ಅಥವಾ

ಅವರ ತಾಯಿಯ ಬಳಿಯಾಗಲಿ ಚೀಟಿ ಗೆ ಸೇರಿರುವುದಾಗಲಿ ಮತ್ತು ಚೀಟಿಯ ಹಣ ಕಟ್ಟಿರುವುದಾಗಲಿ ಹಾಗೂ ಅದನ್ನು ಕೂಗಿ ತೆಗೆದುಕೊಂಡಿರುವುದಾಗಲಿ ನನಗೆ ನೆನಪಿರುವುದಿಲ್ಲ. ಇದೇ ವರುಷದಲ್ಲಿ ನಾನು ಚೀಟಿ ಕಟ್ಟಿರುತ್ತೇನೆ ಹಾಗೂ ಇದೆ ವರುಷದಲ್ಲಿ ನಾನು ಚೀಟಿ ಕೂಗಿ ತೆಗೆದುಕೊಂಡಿರುತ್ತೇನೆ ಎಂದು ನಾನು ವಕೀಲರಿಗೆ ಹೇಳಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಚೀಟಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ವಿಚಾರವನ್ನು ವಕೀಲರಿಗೆ ಹೇಳಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ.

ನಾನು ಮತ್ತು ಆರೋಪಿಯು ಸಂಬಂಧಿಕರಾಗಿರುವುದಿಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ನನ್ನ ಸಂಬಂಧಿಕರಾಗಿದ್ದರು ಸಂಬಂಧಿಕರು ಅಲ್ಲಾ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಶ್ವತ್ , ಸ್ವಾಮಿ , ಆರೋಪಿ , ಕುಮಾರಿ , ಚಂದ್ರಿಕ ಮತ್ತು ಸಿದ್ದಪ್ಪರವರು ನನಗೆ ಪರಿಚಯಸ್ತರು . ಸದರಿಯವರು ಕಲಾವತಿಯವರ ಬಳಿ ಯಾವ ವರುಷದಲ್ಲಿ ಚೀಟಿ ಹಾಕಿದ್ದರು ಮತ್ತು ಎಷ್ಟು ಕಟ್ಟಿದ್ದರು ಹಾಗೂ ಯಾವಾಗ ಚೀಟಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನನಗೆ ಸದರಿ ವಿಚಾರವಾಗಿ ವೈಯಕ್ತಿಕವಾಗಿ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಮತ್ತು ಪಿರ್ಯಾದುದಾರರು ವೈಯಕ್ತಿಕವಾಗಿ ಏನು ವ್ಯವಹಾರ ಮಾಡುತ್ತಾರೆ ಮತ್ತು ಅವರಿಬ್ಬರ ಮಧ್ಯೆ ಏನು ವ್ಯವಹಾರವಿದೆ ಎಂದು ನನಗೆ ಗೊತ್ತಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ